ಶ್ರೀ ಕೆ. ಪ್ರಭಾಕರ್ .-(ಎಫ್)ಗೆ ಉತ್ತರವಾಗಿ ಸ್ಪೆಷಲಿ ಅರ್ಡ್ಯಯಸ್ ನೇಚರ್ ಆಫ್ ಡ್ಯೂಟೀಸ್‌ಗೆ ಸ್ಪೆಷಲ್ ಪೇ ಕೊಡುತ್ತಿರುವುದು ಎಂದು ಹೇಳಿದ್ದಾರೆ. ಆದ್ದರಿಂದ ಇಂತಹ ಸ್ಪೆಷಲ್ ಅರ್ಡ್ಯುಯಸ್ ನೇಚರ್ ಆಫ್ ವರ್ಕಿಗೆ ಇಂತಿಷ್ಟು ಸ್ಪೆಷಲ್ ಪೇ ಎಂದು ಏನಾದರೂ ಮಾಡಿದ್ದಿರಾ ; ಮುಂತ್ತು ಸಮಯೋಚಿತವಾಗಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಯಾವ್ಯಾವುದರಲ್ಲಿ ಎಷ್ಟೆಷ್ಟು ಮಟ್ಟಿನ ಕಷ್ಟವಿದೆಯೆಂಬುದನ್ನು ಆಯಾ ಕೆಲಸವನ್ನು ನೋಡಿಕೊಂಡು ಮಾಡಬೇಕಾಗುತ್ತದೆಯೇ ಹೊರತು ಇದಕ್ಕೆ ಒಂದು ನಾರ್ಮ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ ಆರ್. ಶ್ರೀನಿವಾಸಲು ನಾಯ್ಡು .—ಸರ್ಕಲ್ ಇನ್ ಪೆಕ್ಟರುಗಳಿಗೆ ಮತ್ತು ಸಬ್-ಇನ್ಸ್‌ಪೆಕ್ಟರು ಗಳಿಗೆ ೪೦ ರೂಪಾಯಿ ಮತ್ತು ೧೮ ರೂಪಾಯಿ ಕೊಡುತ್ತಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್ಸಿಗೆ ಕೊಡುತ್ತಾ ಇಲ್ಲ. ಎರಡು ದರ್ಜೆಯೂ ಒಂದೇ ಗ್ರೇಡಿನಲ್ಲಿರುವುದ ರಿಂದ ತಾರತಮ್ಯ ಏಕೆ ಮಾಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅದಕ್ಕೆ ಉತ್ತರ ಅಲ್ಲೇ ಇದೆ. ಅದನ್ನು ತಾವು ಓದಿಕೊಳ್ಳ ಬಹುದು.

RISE IN PRICE OF FOODSTUFFS AND SUGAR

425. SRI K. M. NAGANNA (Chickpet).—

Will the Minister of State for Food and Civil Supplies be pleased to state :—

(*a*) whether it has come to the notice of the Government that prices of foodstuffs including sugar have risen abnormally ;

(*b*) if so, the steps taken by the Government to arrest the same ?

SMT. E. E. VAZ (Minister of State for Food and Civil Supplies) .—

(*a*) No ; the prices have not risen abnormally.

(*b*) Does not arise.

ಶ್ರೀ ಕೆ. ಎಂ. ನಾಗಣ್ಣ .—ಉತ್ತರದಲ್ಲಿ ಬೆಲೆಗಳು ಅತಿಯಾಗಿ ಹೆಚ್ಚಿರುವುದಿಲ್ಲವೆಂದು ಹೇಳಿದ್ದಾರೆ. ಬಹುಶಃ ಮಂತ್ರಿಯಾದ ಮೇಲೆ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಳ್ಳದೆ ಈ ರೀತಿ ಬೆಲೆಗಳು ಏರಿರುವುದೂ ಇವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ಇನ್ನಾದರೂ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಂಡು ಬೆಲೆಗಳು ಜಾಸ್ತಿಯಾಗುತ್ತದೆಯೆ ಇಲ್ಲವೇ ಎಂದೂ ತಿಳಿದುಕೊಂಡು, ಬೆಲೆಗಳು ಏರಿದರೆ ತಡೆಗಟ್ಟುತ್ತಾರೆಯೇ ?

† ಶ್ರೀಮತಿ ಇ. ಇ. ವಾಜ್ .—ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಳ್ಳದೆ ಇಲ್ಲ. ಸಂಪರ್ಕ ಇಟ್ಟು ಕೊಂಡಿದ್ದೇನೆ. ಅದೂ ಅಲ್ಲದೆ ನಾನೂ ಸಹ ಆಹಾರಧಾನ್ಯ ಗಳನ್ನು ಕೊಂಡುಕೊಳ್ಳುತ್ತಿದ್ದೇನೆ. ಮುಂತ್ತು ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ .—ಹೀಗೆ ಬಡ ಜನರ ಸಂಪರ್ಕ ಇಟ್ಟುಕೊಂಡು ಬೆಲೆಗಳು ಜಾಸ್ತಿಯಾದರೆ ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆಯೆ ?

ಶ್ರೀಮತಿ ಇ ಇ. ವಾಜ್ .—ಬೆಲೆಗಳನ್ನು ಯಾವ ತರಹ ಕಡಿಮೆ ಮಾಡಬೇಕೆಂಬುದರ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆ.

SRI M. S. KRISHNAN .—In view of your answer to (a) can I take it that it is an admission on your part that the prices have risen normally ?

SMT. E. E. VAZ .—Normally means sometimes they group and sometimes they come down. In some districts it will be little more and in some other districts it may be little less.

SRI D. B. KALMANKAR .—Has it come to the notice of the Government that the price of jawar and essential commodities have gone up in Gulbarga district due to scarcity conditions prevailing there ?

SMT. E. E. VAZ .—It has not come to the notice of the Government. However, if the prices have gone up we will try to bring them down.

SRI B. B. SAYANAK .—May I know what is the price of sugar now?

SMT. E. E. VAZ .—I don't know to which sugar—whether Open market or levy sugar-the hon. member is referring to.

ಶ್ರೀ ಜೆ. ಪಿ. ನಂಜಯ್ಯನಮಠ .—ಈಗ ಬಿಜಾಪುರ ಜಿಲ್ಲೆಯಲ್ಲಿ ಜೋಳದ ಬೆಲೆಯು ಕ್ವಿಂಟಾಲಿಗೆ ೧೯೦–೧೧೫ ಇದ್ದದ್ದು ೧೨೦–೧೨೫ಕ್ಕೆ ಏರಿರುವುದು ತಮ್ಮ ಗಮನಕ್ಕೆ ಬಂದಿದೆಯೇ ; ಮತ್ತು ಸಜ್ಜಿಯ ಧಾರಣೆಯು ಸಹ ಕ್ವಿಂಟಾಲಿಗೆ ೮–೧೦ ರೂಪಾಯಿ ಹೆಚ್ಚಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀಮತಿ ಇ. ಇ. ವಾಜ್ .—ಅದು ನಮ್ಮ ಗಮನಕ್ಕೆ ಬಂದಿಲ್ಲ. ಆದಷ್ಟು ಮಟ್ಟಿಗೆ ನಾವು ಎಲ್ಲೆಲ್ಲಿ ಬೆಲೆಗಳು ಜಾಸ್ತಿಯಾಗಿವೆ, ಅಲ್ಲಿರುವಂತಹ ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ನಮ್ಮಲ್ಲಿ ಇದ್ದಂತಹ ಜೋಳವನ್ನು ವಿತರಣೆ ಮಾಡುವಂತಹ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ .—ಈಗ ತಮ್ಮ ಉತ್ತರದಲ್ಲಿ ಬೆಲೆಗಳು ಹೆಚ್ಚಾಗಿಲ್ಲವೆಂದು ಹೇಳಿದ್ದೀರಿ. ಇದರ ಬಗ್ಗೆ ತಮಗೆ ಏನಾದರು ದೂರುಗಳು ಬಂದಿವೆಯೇ ; ಮತ್ತು ದೂರುಗಳು ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು .—ಅದಕ್ಕೆ ಆವಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಜೆ. ಎಲ್ ಕಬಾಡಿ .—ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಈಗಾಗಲೇ ಬರಗಾಲ ಪರಿಸ್ಥಿತಿ ಉಂಟಾಗಿರುವುದರಿಂದ ಧಾರಣೆಗಳು ಹೆಚ್ಚಾಗಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಸಹ ಹೇಳಿದ್ದಾರೆ ; ಮತ್ತು ಬೆಲೆಗಳನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿ ಬೆಲೆಗಳು ಎಷ್ಟು ಮಲ್ಟಿಗೆ ಏರಿದೆ ಎಂದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಮತ್ತು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೆ ?

ಶ್ರೀಮತಿ ಇ. ಇ. ವಾಜ್ .—ಮೊನ್ನೆ ಬಿಜಾಪುರದ ಜಿಲ್ಲಾಧಿಕಾರಿಗಳು ನಮ್ಮ ಆಫೀಸಿಗೆ ಬಂದಿದ್ದರು. ಆಗ ಒಂದು ಸಾವಿರ ಕ್ವಿಂಟಲ್ ಗೋಧಿ ಮತ್ತು ಇತರ ಸಾಮಗ್ರಿಗಳನ್ನು ಅಲ್ಲಿಗೆ ಕೊಟ್ಟಿದ್ದೇವೆ. ಮತ್ತು ಅಲ್ಲಿ ಏರಿರತಕ್ಕೆ ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇವೆ.

SMT. WINNIFRED F. FERNANDES.—Has it come to the notice of the Government that the price of rice per quintal has risen by Rs. 30 to Rs. 35 during this month and if so, what is the action Government propose to take ?

SMT. E. E. VAZ.—It has not come to my notice. But for South Kanara district we have increased the quota of rice by 100 tonnes.

ಶ್ರೀ ಸಿ. ಬೈರೇಗೌಡ.—ಈಗ ಸರ್ಕಾರದ ವಶದಲ್ಲಿ ಎಷ್ಟು ಆಹಾರ ಧಾನ್ಯ ದಾಸ್ತಾನು ಇದೆ ? ಮತ್ತು ಈ ರೀತಿ ಬೆಲೆಗಳು ಹೆಚ್ಚದಿರುವುದಕ್ಕೆ ಏನು ಸ್ಪೆಸಿಫಿಕ್ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಮತ್ತು ತೆಗೆದುಕೊಳ್ಳದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ಇ. ಇ. ವಾಜ್.—ನಮ್ಮ ಗೋಡೌನಿನಲ್ಲಿ ಈಗ ೩೦,೭೪೦ ಟನ್ ಅಕ್ಕಿ ದಾಸ್ತಾನು ಇದೆ. ಇದಲ್ಲದೆ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಂದ ೧೦ ಸಾವಿರ ಮೆಟ್ರಿಕ್ ಟನ್ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅದು ಬಂದ ತಕ್ಷಣ ಅದನ್ನು ವಿತರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಆದಷ್ಟು ಬೆಲೆ ಏರದಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಭುರಾಜ್ ಲಿಂಗನಗೌಡ :—ಬ್ರಿಟಿಷರ ಕಾಲದಲ್ಲಿ ಸಾಮಾನ್ಯ ಪ್ರಜೆಗಳ ಹಿತದೃಷ್ಟಿಯಿಂದ ಜೀವನಾವಶ್ಯಕವಾದ ವಸ್ತುಗಳಾದ ಬ್ರೆಡ್, ಬಟರ್ ಮೊದಲಾದ ವಸ್ತುಗಳ ಬೆಲೆಯನ್ನು ನಿರ್ದಿಷ್ಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಯಾರೂ ಮಾರಕೂಡದು ಎಂದು ಮಾಡಿದ್ದರು. ಅದೇ ರೀತಿಯಲ್ಲಿ ತಾವು ಅತ್ಯಾವಶ್ಯಕ ಜೀವನ ವಸ್ತುಗಳನ್ನು ನಿರ್ದಿಷ್ಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಕೂಡದೆಂ ಎಂದು ಒಂದು ಕಾಯಿದೆಯನ್ನು ಮಾಡಿ, ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವಂತಹ ಒಂದು ಏರ್ಪಾಡು ಮಾಡಿ ಆಚರಣೆಗೆ ತರುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರ ಸಲಹೆಯನ್ನು ಗಮನಿಸುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರು ನಗರದಲ್ಲಿ ಒಂದು ಕೆಜಿ ಅಕ್ಕಿಗೆ ೧-೭೦, ಮತ್ತು ಬೇಳೆಗೆ ೨-೩೦ ಬೆಲೆಯಾಗಿದೆ. ಇದರಿಂದ ಶೇಕಡಾ ೫೦ರಷ್ಟು ಬೆಲೆ ಜಾಸ್ತಿಯಾಗಿದ್ದರೂ ಸರ್ಕಾರ ಏಕೆ ಬೆಲೆಯನ್ನು ಹತೋಟಿಯಲ್ಲಿ ಇಟ್ಟಿಲ್ಲ ? ಮತ್ತು ತಮ್ಮಲ್ಲಿರುವ ದಾಸ್ತಾನಿನಿಂದ ೧೦ ಸಾವಿರ ಟನ್ ರಿಲೀಸ್ ಮಾಡಿ ಈ ಬೆಲೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

SUPPLY OF WATER TO GOWRIBIDANUR TALUK

431 SRI V. KRISHNA RAO (Gowribidanur)

Will the Minister of State for Major Irrigation be pleased to state :—

(*a*) whether there is a proposal to bring water of Upper Bhadra Channel to Sira Taluk for Irrigation purposes ;

(*b*) if so, whether the same facility is to be extended to Gowribidanur Taluk ?

SRI H. N. NANJE GOWDA (Minister of State for Major Irrigation)

(*a*) and (*b*) Upper Bhadra Project is still under investigation.

ಶ್ರೀ ವಿ. ಕೃಷ್ಣರಾವ್.—ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ತನಿಖೆ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ಈ ತನಿಖೆ ಎಷ್ಟು ದಿವಸಗಳಲ್ಲಿ ಪೂರೈಸುತ್ತದೆ ?

†ಶ್ರೀ ಎಚ್. ಎನ್. ನಂಜೇಗೌಡ.—ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇವೆ.

ಶ್ರೀ ವಿ. ಕೃಷ್ಣರಾವ್.—ಇದು ಪೂರ್ತಿಯಾದ ಮೇಲೆ ಗೌರಿಬಿದನೂರಿಗೆ ನೀರು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?